**ಡಿ.ಡಬ್ಲ್ಯೂ-1**

**ದಿನಾಂಕಃ 01-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಕೆ.ವಿ. ವಕೀಲರಿಂದಃ-

ನಿಪಿ-30 ರ 2 ನೇ ಪ್ಯಾರಾದಲ್ಲಿ ಹೇಳಿರುವ ವಿಷಯ ಸರಿ ಇರುತ್ತದೆ. ಓ.ಎಸ್.61/21 ರ ಕೇಸು ಕೊನೆಯ ಹಂತಕ್ಕೆ ಇದೆ ಎಂದರೆ ಸರಿ. ಆ ದಾವೆಗೂ ನಾನು ಎ.ಜಿ.ಡಿ. ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿ. ಓ.ಎಸ್.61/2021 ರ ಪ್ರತಿವಾದಿ ಪತ್ರವನ್ನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ-31 ಎಂದು ಗುರುತಿಸಲಾಯಿತು. ದಾವಾ ಎಲ್ಲಾ ಆಸ್ತಿಗಳು ಅರಸೀಕೆರೆಯಿಂದ 3 ಕಿ.ಮೀ. ದೂರದಲ್ಲಿರುವ ಮುದ್ದನಹಳ್ಳಿ ಗ್ರಾಮದಲ್ಲಿವೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಬಾಯಿ ಮಾತಿನಿಂದ ವಿಭಾಗ ಆಗಿದ್ದು ಲಿಖಿತ ರೂಪದಲ್ಲಿ ಆಗಿರುವುದಿಲ್ಲ. ಅದೇ ರೀತಿ ವಿಭಾಗ ಆಗಿದೆ ಎಂದು ತೋರಿಸುವ ಯಾವುದೇ ಕಂದಾಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ದೇವಿಬಾಯಿ ನನಗೆ ಅಕ್ಕನಾಗಬೇಕು. ವಾದಿ ದೇವಿಬಾಯಿಯ ಮಗಳಾಗಿದ್ದು ಆಕೆಗೆ ಅವರ ತಾಯಿಗೆ ಬರುವ ಭಾಗಾಂಶದ ಹಕ್ಕು ಇದ್ದರು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಿಬಾಯಿಯ ಮದುವೆ ಆಗಿರುವುದಿಲ್ಲ. ವಾದಿಗೆ 1/3 ಭಾಗಾಂಶ ಇದೆ ಎಂದರೆ ಸರಿಯಲ್ಲ. ನಾವು ಮಾಡಿಕೊಂಡ ಒಪ್ಪಂದ ಪತ್ರ ಮತ್ತು ಕ್ರಯಪತ್ರಗಳು ವಾದಿಯ ಪಾಲಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ನನಗೆ 17 ವರ್ಷ ವಯಸ್ಸು ಇದ್ದಾಗಿನಿಂದಲೇ ನ್ಯಾಯಾಲಯದ ಮತ್ತು ವ್ಯವಹಾರದ ಬಗ್ಗೆ ಜ್ಞಾನ ಇದೆ.

ಮರು ವಿಚಾರಣೆಃಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **01-02-2025.**